ಜ್ಯೂವೆಲ್ಸ್'ನಲ್ಲಿ ಇಟ್ಟಿರುವ ಕಿರೀಟ, ರಾಣಿಯ ಆಸನಗಳು, ಬಂಗಾರ–ಬೆಳ್ಳಿಯ ಪಾತ್ರೆಗಳು ಬೆರಗನ್ನು ಮೂಡಿಸುತ್ತವೆ.

ಟವರ್ ಆಫ್ ಲಂಡನ್ ಕೋಟೆಯ ಟವರ್ ಗಾರ್ಡ್‌ಗಳೆಂದು ಕರೆಯುವ ಕಾವಲುಗಾರರು ರಾಯಲ್ ರೆಜಿಮೆಂಟಿನ ಸಿಪಾಯಿಗಳು. ಕೆಂಪು ಶರ್ಟ್, ಕಪ್ಪು ಪ್ಯಾಂಟ್, ಕಣ್ಣಿನವರೆಗೆ ವಿಚಿತ್ರ ವಿಗ್ ಧರಿಸಿರುತ್ತಾರೆ. ಅವರದ್ದು ಕಳೆದ ಐದು ಶತಮಾನಗಳಿಂದಲೂ ಅದೇ ಸಮವಸ್ತ್ರವಂತೆ. 'ಚೇಂಜಿಂಗ್ ಆಫ್ ಗಾರ್ಡ್ಸ್' ಎಂದು ಕರೆಯುವ ಕಾವಲುಗಾರರ ಪಾಳಿ ಬದಲಾವಣೆ ನೋಡಲು ಆಕರ್ಷಕ.

## ಯೋಮನ್ ಕಾವಲುಭಟರು

'ಟವರ್ ಆಫ್ ಲಂಡನ್' ನೋಡಲು ಹೋಗುವ ಪ್ರವಾಸಿಗರಿಗೆ ಇಂಗ್ಲೆಂಡಿನ ಇತಿಹಾಸ, ಲಂಡನ್ ಟವರಿನ ಪ್ರಾಮುಖ್ಯತೆ, ಅದರ ಇತಿಹಾಸ, ವಾಸ್ತವದಲ್ಲಿ ಅದರ ವೈಶಿಷ್ಟ್ಯತೆ ಮುಂತಾದವುಗಳನ್ನು ವಿವರಿಸುವ ವಿಶಿಷ್ಟ ದಿರಿಸಿನ ಹಸನ್ಮುಖಿ ಹಾಗೂ ಚಂದದ ಮಾರ್ಗದರ್ಶಿಗಳಿರುತ್ತಾರೆ. ಅವರನ್ನು 'ಯೋಮನ್ ವಾರ್ಡರ್ಸ್' ಎನ್ನುತ್ತಾರೆ.

ಯೋಮನ್ ಕಾವಲುಭಟರು ಅಂದರೆ ಬ್ರಿಟನ್ ರಾಣಿಯ ಅರಮನೆಯ ಹಾಗೂ ಟವರ್ ಆಫ್ ಲಂಡನ್ನಿನ ಅಧಿಕೃತ ರಕ್ಷಕರು. ಅವರನ್ನು ಬೀಫೀಟರ್ಸ್ ಎಂದು ಸಹ ಕರೆಯುವರು. ಹನ್ನೊಂದನೇ ಶತಮಾನದಲ್ಲಿ ಟವರ್ ಆಫ್ ಲಂಡನ್ ಕಟ್ಟಿದಾಗಿನಿಂದಲೂ ಇವರು ಇದ್ದಾರೆ. ಹಿಂದೆ ಟವರ್ ಆಫ್ ಲಂಡನ್‌ನಲ್ಲಿ ಇರಿಸಲಾಗುತ್ತಿದ್ದ ಕೈದಿಗಳಿಗೆ ಕಾವಲು ಕಾಯುತ್ತಾ, ಅವರಿಗೆ ನೀಡಿರುವ ಶಿಕ್ಷೆಯನ್ನು ಅಮಲುಪಡಿಸುವ ಕೆಲಸವನ್ನೂ ಸಹ ಮಾಡುತ್ತಿದ್ದರು.

ಪ್ರಸ್ತುತ ಯೋಮನ್ ಕಾವಲುಭಟರು ಟವರ್ ಆಫ್ ಲಂಡನ್‌ನಲ್ಲಿ ಇತಿಹಾಸಕಾರರು ಮತ್ತು ಮಾರ್ಗದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

## ಕಾವಲುಭಟರಾಗುವುದು ಸುಲಭವಲ್ಲ!

ಯೋಮನ್ ಕಾವಲುಭಟರಾಗುವ ಮುನ್ನ ಆ ವ್ಯಕ್ತಿ ಬ್ರಿಟಿಷ್ ಸೈನ್ಯ, ರಾಯಲ್ ಮೆರೀನ್ ಅಥವಾ ರಾಯಲ್ ಏರ್ ಫೋರ್ಸ್‌ನಲ್ಲಿ ಕನಿಷ್ಠ 22 ವರ್ಷ ಸೇವೆ ಸಲ್ಲಿಸಿರಬೇಕು ಮತ್ತು ಹಿರಿಯ ನಾನ್ ಕಮ್ಯೂಷನ್ಡ್ ಆಫೀಸರ್ ಶ್ರೇಣಿಯನ್ನು ಪಡೆದಿರಬೇಕು. ದಿನ ಅಥವಾ ರಾತ್ರಿ ಯಾವುದೇ ಸಮಯದಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕಾಗಬಹುದು ಎಂಬ ಕಾರಣದಿಂದ ಎಲ್ಲಾ ಯೋಮನ್ ಕಾವಲುಭಟರು (ಮತ್ತು ಅವರ ಕುಟುಂಬಗಳು) ಟವರ್ ಆಫ್ ಲಂಡನ್‌ನಲ್ಲಿಯೇ ನಿವಾಸಿಸುತ್ತಾರೆ. ಯೋಮನ್ ತಂಡಕ್ಕೆ ಮೊದಲ ಮತ್ತು ಏಕೈಕ ಮಹಿಳೆ ಸೇರ್ಪಡೆಯಾದದ್ದು 2007ರಲ್ಲಿ. ಒಟ್ಟು 36 ಮಂದಿ ಪುರುಷ ಕಾವಲುಭಟರಿದ್ದಾರೆ.

## ಬೀಗ ಹಾಕುವ ಆಚರಣೆ

ಪ್ರತಿ ರಾತ್ರಿ ಟವರ್ ಆಫ್ ಲಂಡನ್‌ನ ಗೇಟ್ ಮುಚ್ಚಿ ಬೀಗ ಹಾಕುವಾಗ ವಿಶಿಷ್ಟವಾದ ಆಚರಣೆಯಿದೆ. ಸುಮಾರು 700 ವರ್ಷಗಳಿಂದ ಇದನ್ನು ಪಾಲಿಸಲಾಗುತ್ತಿದೆ. ಹೊರಬಾಗಿಲ ದೊಡ್ಡ ಬೀಗ ಹಾಕಿದಾಗ 'ಕ್ಲಂಕ್' ಎಂಬ ಶಬ್ದ ಬರುತ್ತಿದ್ದಂತೆಯೇ, ಕಾವಲಿನವನು, 'ನಿಲ್ಲು, ಯಾರದು ಬಂದಿರುವುದು?' ಎಂದು ಜೋರಾಗಿ ಕೂಗುವನು. ಪ್ರತಿಯಾಗಿ ಯೋಮನ್ ಕಾವಲುಭಟ, 'ಕೀಗಳು' ಎನ್ನುತ್ತಾನೆ. 'ಯಾರ ಕೀಗಳು?', 'ರಾಣಿ ಎಲಿಜಬೆತ್ ಅವರ ಕೀಗಳು', 'ಸರಿ, ಹಾಗಾದರೆ ಮುಂದೆವರೆಯಿರಿ' ಹೀಗೆ ನಡೆಯುವ ನಾಟಕೀಯ ಸಂಭಾಷಣೆ ಬಹು ದೂರದವರೆಗೂ ಕೇಳಿಸುವಂತಿರುತ್ತದೆ. ನಂತರ ಯೋಮನ್ ಕಾವಲುಭಟ ಕೀಗಳನ್ನು ಸ್ಥಳೀಯ ಗವರ್ನರ್‌ಗೆ ನೀಡುತ್ತಾನೆ. ಕೊಡುವಾಗ, 'ದೇವರ ಆಶೀರ್ವಾದ ರಾಣಿ ಎಲಿಜಬೆತ್ ಮೇಲಿರಲಿ' ಎಂದಾಗ, ಗವರ್ನರ್, 'ಶುಭಂ' ಎನ್ನುವರು. ದಿನಕ್ಕೊಬ್ಬರಂತೆ ಪಾಳಿಯಲ್ಲಿ ಯೋಮನ್ ಕಾವಲುಭಟರು ಈ ಆಚರಣೆಯಲ್ಲಿ ಭಾಗಿಯಾಗುವರು.

## ಆಕರ್ಷಕ ಸಮವಸ್ತ್ರ

ಪ್ರಮುಖ ಸಂದರ್ಭಗಳಲ್ಲಿ ಯೋಮನ್ ಕಾವಲುಭಟರು ಕೆಂಪು ಮತ್ತು ಚಿನ್ನದ ಬಣ್ಣದ ಟ್ಯೂಡರ್ ಸಮವಸ್ತ್ರಗಳನ್ನು ಧರಿಸುತ್ತಾರೆ. ಆದರೆ ಅವರ ದೈನಂದಿನ ಸಮವಸ್ತ್ರವು ಕೆಂಪು ಪಟ್ಟಿಗಳಿರುವ ಕಡು ನೀಲಿ ಬಣ್ಣದ್ದಾಗಿರುತ್ತದೆ. ಇವರೆಲ್ಲ ಸಾರ್ವಭೌಮತ್ವದ ರಕ್ಷಕರಾಗಿ ನೇಮಕವಾದಾಗ ಪ್ರಮಾಣವಚನ ಸ್ವೀಕರಿಸುವುದು ಸೇಂಟ್ ಜೇಮ್ಸ್ ಪ್ಯಾಲೇಸ್‌ನಲ್ಲಿ.

ಯೋಮನ್ ತಂಡದ ಮೇಲ್ವಿಚಾರಕರಾಗಿ ಪ್ರಧಾನ ಯೋಮನ್ ಕಾವಲುಭಟ ಇದ್ದರೆ, ನಂತರದ ಸ್ಥಾನದಲ್ಲಿ ಯೋಮನ್ ಜೈಲರ್ (ಗಾಲರ್) ಇರುತ್ತಾರೆ. ನಾಲ್ವರು ಯೋಮನ್ ಸಾರ್ಜೆಂಟ್‌ಗಳು, ಒಬ್ಬರು ಯೋಮನ್ ಕ್ಲರ್ಕ್ ಮತ್ತು 30 ಮಂದಿ ಕಾವಲುಭಟರು ತಂಡದಲ್ಲಿರುತ್ತಾರೆ.

ಒಂದು ದಂತಕಥೆಯ ಪ್ರಕಾರ ರಾವನ್ ಹಕ್ಕಿ ಲಂಡನ್ ಗೋಪುರವನ್ನು (ಹಾಗೆಯೇ ಬ್ರಿಟಿಷ್ ರಾಜಪ್ರಭುತ್ವ) ತೊರೆದರೆ ಅದು ಕುಸಿತಕ್ಕೊಳಗಾಗುತ್ತದೆಯಂತೆ. ಅದಕ್ಕಾಗಿ ಮುಂಜಾವಿನಿಂದ ಮುಸ್ಸಂಜೆಯವರೆಗೆ ಹಕ್ಕಿಗಳಿಗೆ ಪಾಲನೆ ಪೋಷಣೆ ನಡೆಯುತ್ತದೆ.

ಕಟ್ಟಡವೇ ಪುಟ್ಟ ಊರು ಯೋಮನ್ ಕಾವಲುಭಟರ ಕೆಲಸ ಹಲವಾರು ರೀತಿಯದ್ದು. ವಾಚ್‌ಮನ್ ರೀತಿ ಪ್ರತಿಯೊಂದು ಗೇಟುಗಳನ್ನು ರಾತ್ರಿ ವೇಳೆ ಕಾವಲು ಕಾಯುವುದರಿಂದ ಹಿಡಿದು, ಪ್ರವಾಸಿಗರ ಸುರಕ್ಷತೆ, ಮಾರ್ಗದರ್ಶನವೂ ಇವರ ಜವಾಬ್ದಾರಿಯೇ. ಯೋಮನ್ ಕಾವಲುಭಟರಿಗೆ ಟವರ್ ಆಫ್ ಲಂಡನ್ ಎಂಬುದೇ ಪುಟ್ಟ ಊರಿದ್ದಂತೆ. ಅವರಿಗಾಗಿ ಅಲ್ಲಿಯೇ ಚರ್ಚ್, ಶಾಲೆ, ಪಾರ್ಕ್, ಕ್ಲಬ್ಬು, ಪಬ್ಬು ಎಲ್ಲವೂ ಇದೆ.



'ಇಂಪೀರಿಯಲ್ ಸ್ಟೇಟ್ ಕ್ರೌನ್' ಎಂದೇ ಕರೆಯುವ 2ನೇ ಎಲಿಜಬೆತ್ ರಾಣಿಯ ಕಿರೀಟ



ಯೋಮನ್ ಕಾವಲುಭಟರ ಜೊತೆ ಪ್ರವಾಸಿ

'ಪ್ರವಾಸಿಗರಿಗೆ ಮಾರ್ಗದರ್ಶನ ಮಾಡುವುದು ನನಗೆ ಬಲು ಇಷ್ಟದ ಕೆಲಸ. ಇತಿಹಾಸ ನನ್ನ ಮೆಚ್ಚಿನ ವಿಷಯ. ಇಲ್ಲಿಗೆ ಬಂದ ನಂತರ ನಾನು ಸಾಕಷ್ಟು ಕಲಿತಿದ್ದೇನೆ. ಪ್ರತಿಯೊಬ್ಬ ಯೋಮನ್ ಕಾವಲುಭಟ ಕೂಡ ವಿಷಯ ಸಂಗ್ರಹಣೆಗಾಗಿ ಸಾಕಷ್ಟು ಓದುತ್ತಾರೆ ಮತ್ತು ಎಲ್ಲರಿಗೂ ತರಬೇತಿ ಕೂಡ ಇರುತ್ತದೆ. ಸ್ಥಳೀಯ ಗವರ್ನರ್ ಮತ್ತು ಪ್ರಧಾನ ಯೋಮನ್ ಕಾವಲುಭಟರ ಮುಂದೆ ಅವರು ತಮ್ಮ ನಿರೂಪಣಾ ಶೈಲಿಯಿಂದ ಮೆಚ್ಚುಗೆ ಪಡೆದ ನಂತರವಷ್ಟೆ ನಾವು ಸಾರ್ವಜನಿಕರಿಗೆ ಮಾರ್ಗದರ್ಶಿಗಳಾಗಲು ಸಾಧ್ಯ. ಹೀಗಾಗಿ ಪ್ರತಿಯೊಬ್ಬರೂ ತಮ್ಮದೇ ಆದ ವಿಶಿಷ್ಟ ಶೈಲಿ ಮತ್ತು ನಿರೂಪಣೆಯಿಂದ ಜನರ ಮೆಚ್ಚುಗೆ ಪಡೆಯುತ್ತಾರೆ' ಎನ್ನುತ್ತಾರೆ ಯೋಮನ್ ಕ್ಲರ್ಕ್ ಫಿಲ್ ವಿಲ್ಸನ್.